ದಿಃ 14-08-2015 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ವಾದಿ ಪರ ವಕೀಲರಾದ ಶ್ರೀ ಬಿ.ಎಚ್. ಇವರ ವತಿಯಿಂದ ಶ್ರೀಮತಿ ಎಸ್.ಪಿ.ಎಸ್. ಇವರಿಂದ ಮುಂದುವರೆದ ಮುಖ್ಯ ವಿಚಾರಣೆಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ. ನಾಲ್ಕು ಗೇಣಿ ಮತ್ತು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-4, ನಾಲ್ಕು ಮ್ಯೂಟೇಶನ್ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-5 ರಿಂದ ನಿಪಿ-8, ಗೇಣಿ ಮತ್ತು ಪಹಣಿ ಪತ್ರಿಕೆಯನ್ನು ನಿಪಿ-9, ಸರ್ವೆ ಮಾಡುವುದಕ್ಕಿಂತ ಮುಂಚೆ ಸರ್ವೆಯರ್ ಕೊಟ್ಟ ನೋಟೀಸಿನ ಕುರಿತು ದಾಖಲೆಯನ್ನು ಹಾಜರುಪಡಿಸಿದ್ದು ನಿಪಿ-10, ಸರ್ವೆಯರ್ ಇವರು ಮಾಡಿದ ಪಂಚನಾಮೆಯ ನಕಲನ್ನು ನಿಪಿ-11, ಹದ್ದುಬಸ್ತು ನಕ್ಷೆಯ ನಕಲುಗಳನ್ನು ನಿಪಿ-12 ಮತ್ತು ನಿಪಿ-13, ನೋಟೀಸಿನ ದೃಢೀಕೃತ ನಕಲನ್ನು ನಿಪಿ-14, ಮಹಜರ್ ನಕಲನ್ನು ನಿಪಿ-15, ಮೂರು ಹದ್ದುಬಸ್ತು ನಕ್ಷೆಯ ನಕಲುಗಳನ್ನು ನಿಪಿ-16 ರಿಂದ ನಿಪಿ-18, ನೋಟೀಸಿನ ನಕಲನ್ನು ನಿಪಿ-19, ಒತ್ತುವರಿ ಜಮೀನು ಬಿಟ್ಟುಕೊಡಲು ಬರೆದುಕೊಟ್ಟ ಒಪ್ಪಿಗೆ ಪತ್ರವನ್ನು ನಿಪಿ-20, ಜಮೀನಿನ ಇಂಡೆಕ್ಸ್ ನಕಲನ್ನು ನಿಪಿ-21, ಗೇಣಿ ಮತ್ತು ಪಹಣಿ ಪತ್ರಿಕೆಯನ್ನು ನಿಪಿ-22, ಎರಡು ಅಸಲು ಕ್ರಯಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-23 ಮತ್ತು ನಿಪಿ-24, ಮ್ಯೂಟೇಶನ್ ನಕಲನ್ನು ನಿಪಿ-25, ಸರ್ವೆ ನಂಃ 85 ಸರ್ವೆ ಕುರಿತು ಕೊಟ್ಟ ನೋಟೀಸನ್ನು ನಿಪಿ-26, ಸರ್ವೆ ನಂಃ 85 ಇದರ ಮಹಜರ್ ನಕಲನ್ನು ನಿಪಿ-27, ಹದ್ದುಬಸ್ತು ನಕ್ಷೆಯ ನಕಲನ್ನು ನಿಪಿ-28, ಕರ್ನಾಟಕ ರಿವಿಜಿನಲ್ ಸೆಟಲ್‌ಮೆಂಟ್ ಆಕಾರ್ ಬಂದ್ ನ್ನು ನಿಪಿ-29 (ಉತಾರು) ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.